






# 'ಸುಡುವ ಭೂಮಿ'ಯ ವಕ್ತಾರ

■ ಪ್ರವೀಣ ಕುಲಕರ್ಣಿ

'ಸುಡುವ ಭೂಮಿ'ಯ ಕುರಿತು ಭಾರತೀಯ ಮೂಲದ ಆಧುನಿಕ ಇತಿಹಾಸಕಾರ ಸುನಿಲ್ ಅಮೃತ್ ಅವರಂತೆ ಇಡಿಯಾಗಿ ಗ್ರಹಿಸಿದ ಮತ್ತೊಬ್ಬ ಸಮಕಾಲೀನ ಚರಿತ್ರೆಕಾರ ಸಿಗುವುದು ಕಷ್ಟವೇನೋ. ಹೌದು, ಇವರನ್ನು 'ಸುಡುವ ಭೂಮಿ'ಯ ವಕ್ತಾರ ಎಂದೇ ಕರೆಯಬಹುದು. ಪರಿಸರದ ಕಥೆಗಳ ಜತೆ, ಜತೆಗೆ ಸಾಮ್ರಾಜ್ಯಗಳ ಹಪಹಪಿಯ ಕಥೆಗಳನ್ನೂ ಅವರು ಹಕ್ಕಿ ಕೊಡುತ್ತಾರೆ. ಮಾನವ ಹತ್ಯಾಕಾಂಡಗಳ ಮೇಲೆ ಬೆಳಕು ಚೆಲ್ಲುತ್ತಲೇ ದಿಗ್ಗಂತ ಪರಿಸರವನ್ನೇ ಉಸಿರುಗಟ್ಟಿಸಿದ ದುರಂತಗಳ ಸರಮಾಲೆಯನ್ನೂ ನಮ್ಮ ಮುಂದೆ ಪ್ರದರ್ಶಿಸುತ್ತಾರೆ. ಭೂಮಿಯನ್ನೇ ಗಂಡಾಂತರಕ್ಕೆ ತಳ್ಳಿದ ಮಾನವನ ಅಸಾಧಾರಣ ಸ್ವಾತಂತ್ರ್ಯದ ವಿಸ್ತರಣೆಯ ಕಡೆಗೆ ಜಗತ್ತಿನ ಗಮನವನ್ನು ಅವರು ಸೆಳೆಯುತ್ತಾರೆ. ಪೆರುವಿನಲ್ಲಿ ಪೋರ್ಚುಗೀಸರು ನಡೆಸಿದ ಬೆಳ್ಳಿ ಗಣಿಗಾರಿಕೆ, ದಕ್ಷಿಣ ಆಫ್ರಿಕಾದಲ್ಲಿ ಬ್ರಿಟಿಷರು ನಡೆಸಿದ ಚಿನ್ನದ ಗಣಿಗಾರಿಕೆ, ಮಧ್ಯ ಏಷ್ಯಾದಲ್ಲಿ ಎಗ್ಗಿಲ್ಲದೆ ನಡೆದಿರುವ ತೈಲ ನಿಕ್ಷೇಪಗಳ ಅವಶೇಷಗಳಲ್ಲಿ ಅವರು ಕಥೆ ಹೆಕ್ಕುತ್ತಾರೆ. ಹೆದ್ದಾರಿಗಳು ಹಾಗೂ ರೈಲು ಮಾರ್ಗಗಳು ಹೇಗೆ ಮನುಷ್ಯರನ್ನು ಯುದ್ಧದ ಹೊಸ ಪ್ರದೇಶಗಳಿಗೆ ಕರೆತಂದವು ಎಂಬುದನ್ನೂ ಅವರು ವಿಶ್ಲೇಷಿಸುತ್ತಾರೆ. ಜಗತ್ತಿನ ಎಲ್ಲ ಬಿಂದುಗಳನ್ನು ತಮ್ಮ ತೀಕ್ಷ್ಣ ನೋಟದಿಂದ ಸ್ಪರ್ಶಿಸುವ ಸುನಿಲ್ ಕಟ್ಟಿಕೊಡುವ ಚರಿತ್ರೆ ಅಮೋಘವಾಗಿದೆ.

ಸುನಿಲ್ ಅವರು ಚಾರಿತ್ರಿಕ ಸಂಗತಿಗಳನ್ನು ಹೀಗೆ ಮಥಿಸಿ ನೋಡುವ ಮನೋಭಾವದ ಕುರಿತು ಈಗ ಪ್ರಸ್ತಾಪಿಸಲು ಕಾರಣವಿದೆ. ಅವರ 'ದಿ ಬರ್ನಿಂಗ್ ಅರ್ಥ್' ಕೃತಿಗೆ ಪ್ರತಿಷ್ಠಿತ ಬ್ರಿಟಿಷ್ ಅಕಾಡೆಮಿಯ ಪ್ರಶಸ್ತಿ ಸಂದಿದೆ. ಅಮೆರಿಕದ ಯಾಲೆ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿರುವ ಸುನಿಲ್ ಅವರ ವೈಯಕ್ತಿಕ ಚರಿತ್ರೆ ಕೂಡ ವಿಶಿಷ್ಟವಾಗಿದೆ. ಅವರು ಜನಿಸಿದ್ದು ನೈರೋಬಿಯಲ್ಲಿ. ಅವರ ತಂದೆ, ತಾಯಿ ಇಬ್ಬರೂ ಭಾರತೀಯರು. ಅವರ ತಂದೆ ಬ್ಯಾಂಕ್ ಉದ್ಯೋಗಿಯಾಗಿದ್ದರೆ, ತಾಯಿ ನೇತ್ರತಜ್ಞೆಯಾಗಿದ್ದರು. ಸುನಿಲ್ ಅವರು ಚಿಕ್ಕವರಿರುವಾಗಲೇ ಅವರ ಕುಟುಂಬ ತನ್ನ ನೆಲೆಯನ್ನು ನೈರೋಬಿಯಿಂದ ಸಿಂಗಪುರಕ್ಕೆ ಬದಲಾಯಿಸಿತು. ಕೇಂಬ್ರಿಜ್ ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪದವಿ ಪಡೆದ ಅವರು, ಕೆಲಕಾಲ ಲಂಡನ್ನಿನಲ್ಲೇ ಬೋಧಕರಾಗಿ ಕೆಲಸ ಮಾಡಿದರು. ಬಳಿಕ ಅಮೆರಿಕಕ್ಕೆ ಸ್ಥಳಾಂತರಗೊಂಡರು.

ಜಗತ್ತಿನ ಇತಿಹಾಸದ ಕುರಿತು ಅವರಿಗೆ ಕುತೂಹಲದ ಕಣ್ಣು. ಅದರಲ್ಲೂ ಏಷ್ಯಾದ ಚರಿತ್ರೆಯೆಂದರೆ ಅವರಿಗೆ ಇನ್ನೂ ಹಿಗ್ಗು. ಅವರ ಬಹುತೇಕ ಶೋಧಗಳು, ಆ ಮೂಲಕ ಹೊರಬಂದ ಕೃತಿಗಳು ಏಷ್ಯಾದ ಚರಿತ್ರೆಯ ಕುರಿತೇ ಮಾತನಾಡುತ್ತವೆ. ಜನರ ಚಲನೆಗಳು ಭೂಮಿಯನ್ನು ಹೇಗೆ ಬದಲಾಯಿಸಿವೆ ಎಂಬುದನ್ನು ಅವರು ಅತ್ಯಂತ ಚಿಕಿತ್ಸಕ ನೋಟದಿಂದ ನೋಡುವ ಯತ್ನ ಮಾಡಿದ್ದಾರೆ. ದಶಕಗಳ ಸಂಶೋಧನೆ, ಖಂಡಾಂತರದ ವಿದ್ಯಮಾನ, ಜನಪದ ಎಲ್ಲವನ್ನೂ ಅರಗಿಸಿಕೊಂಡು ಚರಿತ್ರೆಯ ಕಥೆಯನ್ನು ಕಟೆದಿಟ್ಟಿದ್ದಾರೆ ಈ ಲೇಖಕ.

ಬಾಲ್ಯದಿಂದ ಕಾಲೇಜು ಸೇರುವ ದಿನಗಳವರೆಗೆ ಹಲವು ದೇಶಗಳನ್ನು ಸುತ್ತಿದ, ಅಲ್ಲಿನ ಸಂಸ್ಕೃತಿಗಳಿಗೆ ಮುಖಾಮುಖಿಯಾದ ಸುನಿಲ್ ಅವರಿಗೆ ಸಹಜವಾಗಿಯೇ ಮಾನವ ಚರಿತ್ರೆಯ ಮೇಲೆ ಆಸಕ್ತಿ ಮೂಡಿತು. ಆ ಆಸಕ್ತಿ ಮುಂದೆ ಹೆಮ್ಮರವಾಗಿ ಬೆಳೆಯಿತು. ಮೊದಲ ಹಾಗೂ ಎರಡನೇ ಜಾಗತಿಕ ಸಮರಗಳನ್ನು ಸುನಿಲ್ ಅವರು ನೋಡುವ ದೃಷ್ಟಿಕೋನ ಬಲು ವಿಶಿಷ್ಟವಾಗಿದೆ. ಈ ಎರಡೂ ಜಾಗತಿಕ ಸಮರಗಳು ಜನರ ಧ್ರುವೀಕರಣಕ್ಕೆ, ಮಾತ್ರವಲ್ಲ, ನೈಸರ್ಗಿಕ ಸಂಪನ್ಮೂಲದ ಲೂಟಿಗೆ ಹೇಗೆ ಕಾರಣವಾದವು ಎಂಬುದನ್ನು ಅವರು ವಿವರಿಸುತ್ತಾರೆ. ಭೂಗ್ರಹಕ್ಕೆ ಹೇಗೆ ಎಂದಿಗೂ ಮಾಯದ ಗಾಯವನ್ನು ಮಾಡಲಾಯಿತು ಎಂಬುದನ್ನು ನಾವು ಅರ್ಥೈಸಿಕೊಳ್ಳಲು ಅವರ ಕಥೆಗಳು ಒತ್ತಾಯಿಸುತ್ತವೆ.

ಸುನಿಲ್ ಅವರ 'ಸುಡುವ ಭೂಮಿ' ಕೃತಿಯು ಪರಿಸರದ ಹಾನಿಯು ಹೇಗೆ ವಲಸೆಗೂ ಕಾರಣವಾಯಿತು ಎಂಬುದರ ಕಥೆಯನ್ನು ಸಾದ್ಯಾಂತವಾಗಿ ವಿವರಿಸುತ್ತದೆ. ಸಾಮ್ರಾಜ್ಯಶಾಹಿಯು ಲಾಭದ ಪ್ರಲೋಭನೆಯ ಪತಾಕೆಯನ್ನು ಹಾರಿಸಿಕೊಂಡು ಹೊರಟ ದಂಡಯಾತ್ರೆಯು ಏನೆಲ್ಲ ಅನಾಹುತ ಮಾಡಿತು ಎಂಬುದರ ಕಥೆಯನ್ನು ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ. ವಿಮರ್ಶಕರು 'ಇದೊಂದು ಜಗತ್ತಿನ ಚರಿತ್ರೆಯನ್ನು ದಾಖಲಿಸುವ ಮಹಾಕಾವ್ಯ' ಎಂದು ಬಣ್ಣಿಸಿದ್ದಾರೆ. ಈ ಆಧುನಿಕ ಚರಿತ್ರೆಕಾರನ ಕಥೆ ಹೇಳುವ ಶೈಲಿಗೆ ಜಗತ್ತೇ ಮರುಳಾಗಿದೆ. ಇನ್ಫೊಸಿಸ್, ಫುಕುವೊಕಾ, ಟೋಯ್ನ್‌ಬಿ ತರಹದ ಪ್ರತಿಷ್ಠಿತ ಪುರಸ್ಕಾರಗಳು ಇವರಿಗೆ ಸಂದಿವೆ. ಸುನಿಲ್ ಅವರ 'ಕ್ರಾಸಿಂಗ್ ದಿ ಬೇ ಆಫ್ ಬೆಂಗಾಲ್' ಕೃತಿಯು ಭಾರತದ ಚರಿತ್ರೆಯೊಂದಿಗೆ ತಳಕು ಹಾಕಿಕೊಂಡಿದೆ. 'ಡಿಕಾಲೊನೈಸಿಂಗ್ ಇಂಟರ್‌ನ್ಯಾಷನಲ್ ಹೆಲ್ತ್' ಕೃತಿ ಸಹ ಚರಿತ್ರೆಕಾರರ ಗಮನ ಸೆಳೆದಿದೆ. ಯುರೋಪಿನ ಸಾಮ್ರಾಜ್ಯಗಳು ಭೂಮಿಯ ಮೇಲೆ ಹೇಗೆಲ್ಲ ಗಾಯ ಮಾಡುತ್ತಾ ಬಂದವು ಎಂಬುದರ ಕಥೆಯನ್ನು ಜಗತ್ತಿನ ಮುಂದೆ ಸಾರುತ್ತಾ ಬಂದ ಈ ಚರಿತ್ರೆಕಾರನಿಗೆ ಯುರೋಪಿನಲ್ಲೇ ಅತ್ಯಂತ ಪ್ರತಿಷ್ಠಿತ ಎನಿಸಿದ ಬ್ರಿಟಿಷ್ ಅಕಾಡೆಮಿ ಪ್ರಶಸ್ತಿ ಒಲಿದುಬಂದಿದ್ದು ಅವರಿಗೆ ಸಂದ ದೊಡ್ಡ ಗೌರವವಾಗಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65